ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕರ್ನಾಟಕ ಸರ್ಕಾರ

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ./ 4 /2018-19

ದಿನಾಂಕ: 08-09-2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯ ಪ್ರಕೃತಿ ವಿಕೋಪ ಪರಿಹಾರ ಕಾರ್ಯ ಸಂಬಂಧ ಸಮೀಕ್ಷೆಗೆ ನೆರೆಯ ಜಿಲ್ಲೆಯ ಸಿಬ್ಬಂದಿಗಳನ್ನು ನಿಯೋಜಿಸುವ ಕುರಿತು.

ಉಲ್ಲೇಖ: ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಎಎಲ್(1)/ಸಿ.ಆರ್/160/2017-18, ದಿನಾಂಕ 03.09.2018

---

ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಪ್ರಸ್ತುತ ಪರಿಹಾರ ವಿತರಣೆ, ಮೂಲ ಸೌಲಭ್ಯ ಕಲ್ಪಿಸುವಿಕೆ / ಪುನರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ.

ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ಉಲ್ಲೇಖದ ಅಧಿಕೃತ ಜ್ಞಾಪನದಂತೆ ಕೊಡಗು ಜಿಲ್ಲೆಗೆ ತುರ್ತು ಪರಿಹಾರ ಕಾರ್ಯಕ್ಕಾಗಿ ನಿಯೋಜಿಸಿರುವ 10 ಅಧಿಕಾರಿ/ಸಿಬ್ಬಂದಿಗಳನ್ನು ಜಿಲ್ಲಾ ಆಡಳಿತ ಭವನದಲ್ಲಿ ತೆರೆಯಲಾಗಿದ್ದ ದಾಸ್ತಾನು ಕೇಂದ್ರಕ್ಕೆ ನಿಯೋಜಿಸಲಾಗಿತ್ತು. ಪ್ರಸ್ತುತ, ಈ ದಾಸ್ತಾನು ಕೇಂದ್ರದಲ್ಲಿದ್ದ ಎಲ್ಲಾ ಸಾಮಾಗ್ರಿಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜು ಇಲ್ಲಿ ತೆರೆಯಲಾಗಿರುವ ದಾಸ್ತಾನು ಕೇಂದ್ರಕ್ಕೆ ಸ್ಥಳಾಂತರಿಸಲಾಗಿರುತ್ತದೆ.

ಮುಂದುವರೆದು, ಜಿಲ್ಲೆಗೆ ಇದೇ ಮಾಹೆ 09, 10 ತಾರೀಕಿನಂದು ಕೇಂದ್ರೀಯ ಅಧ್ಯಯನ ತಂಡ ಆಗಮಿಸಿ ಹಾನಿಯ ಬಗ್ಗೆ ಸಮೀಕ್ಷೆ ನಡೆಸಲಿದ್ದು, ಈ ಸಂಬಂಧ ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ಉಲ್ಲೇಖದ ಅಧಿಕೃತ ಜ್ಞಾಪನದಂತೆ ಕೊಡಗು ಜಿಲ್ಲೆಗೆ ತುರ್ತು ಪರಿಹಾರ ಕಾರ್ಯಕ್ಕಾಗಿ ನಿಯೋಜಿಸಿರುವ ಅಧಿಕಾರಿ/ಸಿಬ್ಬಂದಿಗಳನ್ನು ಈ ಕೆಳಕಂಡಂತೆ ಸಮೀಕ್ಷೆ ಕಾರ್ಯಕ್ಕಾಗಿ ತಹಶೀಲ್ದಾರರು, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕು ಇವರ ಬಳಿ ನಿಯೋಜಿಸಿದೆ.

| ಕ್ರ.ಸಂ. | ಹೆಸರು | ವರದಿಸಿಕೊಳ್ಳಬೇಕಾದ ಅಧಿಕಾರಿ | ಕ್ರ.ಸಂ. | ಹೆಸರು | ವರದಿಸಿಕೊಳ್ಳಬೇಕಾದ ಅಧಿಕಾರಿ |
|---|---|---|---|---|---|
| 1 | ಪ್ರಸಾದ್ | ತಹಶೀಲ್ದಾರ್, ಮಡಿಕೇರಿ ತಾಲ್ಲೂಕು. | 6 | ರಾಜು | ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು. |
| 2 | ಪ್ರದೀಪ್ ಎಂ. | | 7 | ಕಾರ್ತಿಕ್ | |
| 3 | ನಾಗೇಶ್ ಎಸ್. | | 8 | ಪುನೀತ್ ರಾಜ್ | |
| 4 | ನಂದಕುಮಾರ್ | | 9 | ದಿನೇಶ್ | |
| 5 | ಸಿ. ಕುಮಾರ್ | | 10 | ಶಿವರಾಜ್ | |

ತಹಶೀಲ್ದಾರರು, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕು ಇವರು ತಾಲ್ಲೂಕಿನಲ್ಲಿ ಆಗಿರುವ ಹಾನಿಯ ಸಮೀಕ್ಷೆ ಮತ್ತು ಪರಿಹಾರ ವಿತರಣೆ ಕಾರ್ಯದ ಬಗ್ಗೆ ನಿಯೋಜಿತ ಸಿಬ್ಬಂದಿಗಳ ಸಹಕಾರ ಪಡೆದು ತುರ್ತಾಗಿ ಕ್ರಮವಹಿಸಲು ಸೂಚಿಸಿದೆ.

(ಕ.ಟಿ.ಜಿ.ಅ.ಮೇ.)

ಅಪರ ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ